ಇ) 2003–04ನೇ ಸಾಲಿನಲ್ಲಿ, 3ನೇ ಹಂತದ 2 ಕಾಮಗಾರಿಗಳಿಗೆ ಒಟ್ಟು 12.00 ಲಕ್ಷ ಅನುದಾನವು ಬಿಡುಗಡೆ ಆಗಿರುತ್ತದೆ. ಮತ್ತು 2004–05ನೇ ಸಾಲಿನಲ್ಲಿ 4ನೇ ಹಂತದ ಒಂದು ಕಾಮಗಾರಿಗೆ ಅನುದಾನ ಬಿಡುಗಡೆ ಆಗಿರುವುದಿಲ್ಲ.

1135 (90) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು :

ಆ) ಈ ಎಲ್ಲಾ ಕೇಂದ್ರಗಳಿಗೆ ಬೇಕಾಗುವ ವೈದ್ಯರು ಹಾಗೂ ದಾದಿಯವರ ಸಂಖ್ಯೆ ಎಷ್ಟು ;

ಇ) ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ;

ಈ) ಇವುಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿ 26 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ.

ಆ) ವೈದ್ಯರು – 34

ದಾದಿಯರು – 18.

ಇ) ವೈದ್ಯರು – 4

ದಾದಿಯರು – ಖಾಲಿ ಇರುವುದಿಲ್ಲ

ಈ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

1136 (1316) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ (ಗುಲ್ಬರ್ಗ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯ ಕಟ್ಟಡ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ :

ಇ) ಇದನ್ನು ದುರಸ್ಥಿ ಇಲಾಖೆಯಿಂದ ಹಣ ಮಂಜೂರು ಮಾಡಲಾಗಿದೆಯೇ ಮಂಜೂರು ಮಾಡಿದ್ದರೆ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ ಇದರ ವಿವರಣೆಯನ್ನು ನೀಡುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಗುಲ್ಬರ್ಗಾ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯ ನವೀಕರಣ ಹಾಗೂ ವಿಸ್ತರಣಾ ಕಾರ್ಯವು ಜರ್ಮನ್ ನೆರವಿನ ಕೆ.ಎಫ್.ಡಬ್ಲ್ಯೂ. ಎರಡನೇ ಹಂತದಡಿಯಲ್ಲಿ ಸೇರಿದ್ದು, ಅದಕ್ಕಾಗಿ 425.00